


International Journal of Kannada Research
www.kannadajournal.com

**ISSN: 2454–5813**
IJSR 2016; 2(4): 31-34
© 2016 IJKS
www.kannadajournal.com
Received: 07-08-2016
Accepted: 08-09-2016

**ಡಾ.ಎಚ್.ಕೆ.ವೆಂಕಟೇಶ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು
ತೆಂಕನಿಡಿಯೂರು, ಉಡುಪಿ

**Correspondence**
**ಡಾ.ಎಚ್.ಕೆ.ವೆಂಕಟೇಶ**
ಕನ್ನಡ ಸಹಾಯಕ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು
ತೆಂಕನಿಡಿಯೂರು, ಉಡುಪಿ

# ಶಬ್ದದೊಳಗಣ ನಿಶ್ಶಬ್ದ : ಕಪ್ಪು ಕಿವಿಯ ಬಿಳಿಯ ಕುದುರೆಗಳು

**ಡಾ.ಎಚ್.ಕೆ.ವೆಂಕಟೇಶ**

ಕನ್ನಡ ಮಹಿಳಾ ಸಾಹಿತ್ಯದಲ್ಲಿ ಎಂ.ಎಸ್.ವೇದಾ ಅವರದು ಮಹತ್ವದ ಹೆಸರು. ನವ್ಯೋತ್ತರ ಕಾಲಘಟ್ಟದಲ್ಲಿ ಪ್ರಧಾನ ಧಾರೆಯಾಗಿ ಕಾಣಿಸಿಕೊಂಡ ಸ್ತ್ರೀಸಂವೇದನೆಯನ್ನು ತಮ್ಮ ಬರಹದ ಅಂತಃಸತ್ವವನ್ನಾಗಿಟ್ಟುಕೊಂಡು ಸಾಹಿತ್ಯ ಸೃಜಿಸಿದವರು ವೇದಾ ಅವರು. ಕಾವ್ಯಕೂಸು, ಗಂಗೋತ್ರಿಯಲ್ಲಿ ಬಿಳಲುಗಳು, ದಾಖಲಾಗುವುದು ಬೇಡ ಕವನಸಂಕಲನಗಳನ್ನು; ಪ್ರೀತಿ ಮತ್ತು ಸಾವು, ಪಾಲು, ಬಿಳಿಹೆಣ್ಣು ಮತ್ತು ದುಂಡವ್ವನ ದೆವ್ವ ಕಥಾಸಂಕಲನಗಳನ್ನು; ಜಮೀನು, ಜಯ, ಕಪ್ಪು ಕಿವಿಯ ಬಿಳಿಯ ಕುದುರೆಗಳು ಕಾದಂಬರಿಗಳನ್ನು; ಉತ್ತರ ಶಾಕುಂತಲಾ ಎನ್ನುವ ನಾಟಕವನ್ನು ರಚಿಸಿರುವ ಎಂ.ಎಸ್.ವೇದಾ ಅವರು ಬಹುಮುಖ ಪ್ರತಿಭೆಯುಳ್ಳವರಾಗಿ ಬಹುಬಗೆಯ ಸಾಹಿತ್ಯವನ್ನು ಕನ್ನಡಕ್ಕೆ ನೀಡಿದ್ದಾರೆ.

ಪೌರಾಣಿಕ ವಸ್ತುವನ್ನು ಆರಿಸಿಕೊಂಡು ಅದನ್ನು ಆಧುನಿಕ ಜಗತ್ತಿಗೂ ಅನ್ವಯಿಸಿ ಬರೆಯುವ ಪರಿಕ್ರಮ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕಂಡುಬರುತ್ತದೆ. ಆ ನೆಲೆಯಲ್ಲಿ ಭಾರತದಲ್ಲಿ ಬಹುಬಗೆಯ ರಾಮಾಯಣ, ಮಹಾಭಾರತಗಳು ವೈವಿಧ್ಯಮಯವಾಗಿ ಬರಲು ಸಾಧ್ಯವಾಯಿತು. ಪಂಪನಿಂದ ಕುವೆಂಪು ಮತ್ತು ತದನಂತರವೂ ಈ ಪುನರ್‌ರಚನೆ ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ಅದರಲ್ಲೂ ಪೌರಾಣಿಕ ವಸ್ತುವನ್ನು ತೆಗೆದುಕೊಂಡು ಅದನ್ನು ಸ್ತ್ರೀಸಂವೇದನೆಯ ನೆಲೆಗಟ್ಟಿನಲ್ಲಿ ಕಟ್ಟಿಕೊಡುವ ಒಂದು ಪರಂಪರೆಯೇ ಇತ್ತೀಚೆಗೆ ಕಂಡುಬರುತ್ತಿದೆ. ಅನುಪಮಾ ನಿರಂಜನ, ಎಚ್.ವಿ.ಸಾವಿತ್ರಮ್ಮ, ಎಸ್.ವಿ.ಪ್ರಭಾವತಿ, ನಳಿನಿಮೂರ್ತಿ ಮೊದಲಾದವರು ಈ ಪುರಾಣ ಪುನರ್‌ಸೃಷ್ಟಿಸುವ ಪರಂಪರೆಗೆ ಸೇರುತ್ತಾರೆ. ಇದೇ ಜಾಡಿನಲ್ಲಿ ಸಾಗಿರುವ ಎಂ.ಎಸ್.ವೇದಾ ಅವರು ಮಹಾಭಾರತದ ಪುರಾಣ ವಸ್ತುವೊಂದನ್ನು ಆರಿಸಿಕೊಂಡು ಅದರ ಒಡಲಿನಲ್ಲಿ ವರ್ತಮಾನದ ಬದುಕಿನ ತುರ್ತಿನ ಅನೇಕ ಸಂಗತಿಗಳನ್ನು ಕಂಡರಿಸುವ ಪ್ರಯತ್ನ ಮಾಡಿದ್ದಾರೆ.

ಮಹಾಭಾರತದ ಮಹಾಕಾವ್ಯದಲ್ಲಿ ಬಿಂದು ಮಾತ್ರವಾಗಿ ಬರುವ ಮಾಧವಿ ಕತೆಯು ಅನುಪಮಾ ನಿರಂಜನರ ಕೈಯಲ್ಲಿ ಸಿಂಧುವಾಗಿ ಅರಳಿ 'ಮಾಧವಿ' ಕಾದಂಬರಿಯಾಗಿದೆ. ಇದೇ ಕತೆಯು ಭೀಷ್ಮ ಸಹಾನಿ ಅವರ ಅಮೃತಾಸ್ತದಲ್ಲಿ 'ಮಾಧವಿ' ನಾಟಕವಾಗಿ ಮೈತಾಳಿದೆ.

'ಕಪ್ಪು ಕಿವಿಯ ಬಿಳಿಯ ಕುದುರೆಗಳು' ವೇದಾ ಅವರು ಪೌರಾಣಿಕ ವಸ್ತುವನ್ನಾಧರಿಸಿ ರಚಿಸಿದ ಕಾದಂಬರಿ. ಮಹಾಭಾರತದ ಉದ್ಯೋಗಪರ್ವದಲ್ಲಿ ಬರುವ ಕತೆಯ ಎಳೆಯನ್ನೇ ಹಿಡಿದು ವೇದಾ ಅವರು ಈ ಕಾದಂಬರಿಯನ್ನು ಕಡೆದಿದ್ದಾರೆ. ಪೌರಾಣಿಕ ವಸ್ತುವನ್ನಾರಿಸಿಕೊಂಡರೂ ವೈಜ್ಞಾನಿಕ ದೃಷ್ಟಿಯಿಂದ ವಿಶ್ಲೇಷಿಸುವ ಕಾದಂಬರಿಕಾರ್ತಿ ಕಾದಂಬರಿಯನ್ನು ಪ್ರಸ್ತುತತೆಗೆ ಸ್ಪಂದಿಸುವಂತೆ ಮಾಡುತ್ತಾರೆ. ಪರಂಪರೆಯನ್ನು ಪ್ರತಿರೋಧಿಸುವ, ಸಿದ್ಧ ಸಮಾಜದ ಚೌಕಟ್ಟನ್ನು ಮುರಿಯಬಯಸುವ, ಪುರಾಣವನ್ನು ಪುನರ್ ವ್ಯಾಖ್ಯಾನಿಸುವ ಲೇಖಕಿಯ ಚಿಂತನೆ ಕಾದಂಬರಿಯುದ್ದಕ್ಕೂ ಕಂಡುಬರುವುದು ಕೃತಿಗೆ ಜೀವದುಂಬಿದೆ.

ಕಾದಂಬರಿಯ ತಂತ್ರ ವಿಶೇಷವಾಗಿರುವುದನ್ನು ಕಾಣಬಹುದು. ಪಕ್ಷಿಗಳ ಗೂಡು, ಅದನ್ನು ನೋಡಿ ಆನಂದಿಸುವ ಆದಿಮ–ಮಾಧವಿಯರ ಬದುಕಿನ ಚಹರೆಗಳನ್ನು ಕಟ್ಟಿಕೊಡುತ್ತಾ ಕಾದಂಬರಿಯ ಪುಟಗಳು ಆರಂಭದಲ್ಲಿ ತೆರೆದುಕೊಳ್ಳುತ್ತವೆ. ಕಾದಂಬರಿಯ ಕೊನೆಯಲ್ಲಿ ಕೂಡ ಪಕ್ಷಿಗಳು ಗೂಡಿಗೆ ಮರಳುವ ಚಿತ್ರಣವನ್ನು ನೀಡಿರುವುದು ಸೊಗಸಾಗಿದೆ. ಆದಿಮ–ಮಾಧವಿಯರು ಮನೆ ಕಡೆಗೆ ಹೆಜ್ಜೆ ಇಟ್ಟರೆಂದು ಕಾದಂಬರಿಯ ಮುಕ್ತಾಯ ಸೂಚಿಸುವ ಸಂದರ್ಭದಲ್ಲೇ ಅವರು ಹೊಸ ಬಾಳಿಗೆ ಹೆಜ್ಜೆ ಇಟ್ಟರೆಂಬುದನ್ನೂ ಧ್ವನಿಸಿಬಿಡುತ್ತದೆ.

ಹೆಣ್ಣು ಗಂಡಿನ ಸೊತ್ತು, ಕಾಮದ ತುತ್ತು, ಸಮಾಜದ ಸಾರ್ವಜನಿಕರ ಬಳಕೆಯ ವಸ್ತು ಎನ್ನುವ ಸಾಂಪ್ರದಾಯಿಕ ನಿಲುವನ್ನು ಸಂಪೂರ್ಣ ಮೂಲೋಚ್ಚಾಟನೆ ಮಾಡಬೇಕಾದ ತುರ್ತು ಇಂದು ನಮ್ಮ ಮುಂದಿದೆ. ಕಪ್ಪು ಕಿವಿಯ ಬಿಳಿಯ ಕುದುರೆಗಳು ನಾಲ್ಕು ಭಾಗಗಳಲ್ಲಿ, ಕವಲುಗಳಲ್ಲಿ ಕಥಾವಸ್ತುವನ್ನು ನಿರೂಪಿಸುತ್ತದೆ. ಸಾಮಾನ್ಯರ ಕುಟುಂಬದ ಮೇಲೆ ಪ್ರಭುತ್ವ ನಡೆಸುವ ಆಕ್ರಮಣದ ವಿವಿಧ ಮಜಲುಗಳನ್ನು ಕಾದಂಬರಿ ಬಿತ್ತರಿಸುತ್ತದೆ. ಅದರಲ್ಲೂ ಪುರುಷಪ್ರಧಾನ ಪ್ರಭುತ್ವ ಸ್ತ್ರೀಶೋಷಣೆಯನ್ನು ನಿರಂತರವಾಗಿ ಮಾಡಿಕೊಂಡು ಬಂದಿರುವುದನ್ನು ಕಪ್ಪು ಕಿವಿಯ ಬಿಳಿಯ ಕುದುರೆಗಳು ಅನಾವರಣ ಮಾಡುತ್ತದೆ. 'ಮದುವೆ ಇಲ್ಲದೆ ಮಗುವನ್ನು ಪಡೆಯಬಾರದೆ' ಎಂದ ಲಕ್ಷ್ಮಿಯ ತಮಾಷೆಯ ಮಾತು ಮುಂದೆ ನಿಜವಾಗುವುದು ಮತ್ತು ಪ್ರೀತಿಯ ಗಂಡ, ಮಮತೆಯ ಮಗು, ಬೆಚ್ಚಗಿನ ಹಕ್ಕಿಗೂಡು, ಕನಸಿನ ಸಂಸಾರದ ಲಕ್ಷ್ಮಿಯ ಕನಸೆಲ್ಲ ನುಚ್ಚುನೂರಾಗುವುದು ಅವಳ ಮೇಲೆ ಯಯಾತಿ ಮಹಾರಾಜ ಅತ್ಯಾಚಾರ ಮಾಡಿದ ತರುವಾಯವೇ. ಯಯಾತಿಯಿಂದ ಅತ್ಯಾಚಾರಕ್ಕೊಳಗಾಗಿ ಸಂಕಟದ ಬಾಳು ಬಾಳುತ್ತಿರುವ ಲಕ್ಷ್ಮಿಯ ವಿಚಾರ ಆರಂಭದಲ್ಲಿ ತೆರೆದುಕೊಳ್ಳುತ್ತದೆ. ಲಕ್ಷ್ಮಿ ಅವಳ ಮಗಳು ಮಾಧವಿ, ನೆರೆಯ ಪಾರ್ವತಿ ಅವಳ ಮಗ ಆದಿಮರ ಕೌಟುಂಬಿಕ ಬದುಕನ್ನು ಚಿತ್ರಿಸುತ್ತದೆ. ತಮ್ಮ ಕಷ್ಟಗಳ ನಡುವೆಯೇ ನೆಮ್ಮದಿಯಿಂದ ಹೇಗೋ ಇದ್ದ ಕುಟುಂಬದ ಮೇಲೆ ಪ್ರಭುತ್ವ ಮತ್ತೆ ಆಕ್ರಮಣ ಮಾಡುತ್ತದೆ.

ಯಯಾತಿ-ದೇವಯಾನಿ-ಶರ್ಮಿಷ್ಠೆಯರ ಕದನ ಅಂತಃಪುರದಾಚೆಗೆ ದಾಟಿ ಅಲ್ಲೋಲ ಕಲ್ಲೋಲ ಉಂಟುಮಾಡುತ್ತದೆ. ಅದಕ್ಕಾಗಿ ಪುರುವಿನ ಯೌವ್ವನವನ್ನೂ ಬಲಿ ತೆಗೆದುಕೊಳ್ಳುತ್ತದೆ. ಪುರುವಿನ ಯೌವ್ವನದ ಮದದಲ್ಲಿ ಮೆರೆಯುವ ಯಯಾತಿಯು ತನ್ನ ಪ್ರತಿಷ್ಠೆಗಾಗಿ ಮತ್ತು ವಿಶ್ವಾಮಿತ್ರನ ಶಿಷ್ಯ ಗಾಲವನ ಗುರುದಕ್ಷಿಣೆಗಾಗಿ ತನ್ನ ಮಗಳಾದ ಮಾಧವಿಯನ್ನು ದಾನ ಮಾಡಿಬಿಡುತ್ತಾನೆ. ಗಾಡಿಯನ್ನು ಬಾಡಿಗೆಗೆ ಕೊಡುವಂತೆ ಯಯಾತಿ ಮಾಧವಿಯನ್ನೇ ಗಾಲವನಿಗೆ ಬಾಡಿಗೆಗೆ ಕೊಟ್ಟುಬಿಡುತ್ತಾನೆ. "ದುಡಿಯುವ ಗುಲಾಮ ಹೇಗೆ ಮಾಲಿಕನ ಆಳಾದನೋ ಹಾಗೆ ಹೆಂಗಸು ಕೂಡ ಮನೆಯಲ್ಲಿ ಊಳಿಗಗೈಯುವ ತೊತ್ತಾದಳು. 'ಮಹಾಬಾರತ'ದ ಕಾಲಕ್ಕಾಗಲೇ ಸ್ತ್ರೀಯು ಪುರುಷನ ಆಸ್ತಿ ಎಂಬ ಭಾವನೆ ಬಲವಾಗಿ ಬೇರೂರಿತ್ತು" ಮತ್ತು "ರಾಜಮನೆತನದ ಸ್ತ್ರೀಯರನ್ನು ಹೊರಗಿನ ಗಂಡಸರ ಕಣ್ಣಿಗೆ ಬೀಳದಂತೆ ಪ್ರತ್ಯೇಕ ಅಂತಃಪುರದಲ್ಲಿರಿಸಲಾಗುತ್ತಿತ್ತು. ಸಭೆಗಳಲ್ಲಿ ಗಂಡಸಿನೊಂದಿಗೆ ಕೂಡಲು ಆಕೆಗೆ ಹಕ್ಕಿರಲಿಲ್ಲ. ಪುರುಷನ ಕಾಮಪೂರೈಕೆಗೆ ಸ್ತ್ರೀ ಒಂದು ವಸ್ತುವಾಗಿದ್ದಳು. ಅವಳ ಅಲಂಕಾರ ಗಂಡಿನ ಕಣ್ಣಿಗೆ ಅವಳು ಅಂದವಾಗಿ ಕಾಮೋತ್ತೇಜಕವಾಗಿ ಕಾಣಬೇಕು ಎಂಬ ಉದ್ದೇಶದಿಂದಲೇ ಇರುತ್ತಿತ್ತು. ಗಂಡ ತನ್ನ ಹೆಂಡತಿಯನ್ನು ಮಾರಬಹುದಿತ್ತು, ದಾನ ಕೊಡಬಹುದಾಗಿತ್ತು. ಹಸುವಿನಂತೆ ಸ್ತ್ರೀಯ ವಿಕ್ರಯ ನಡೆಯುತ್ತಿತ್ತು. ಇದು ಮಗಳಿಗೂ ಅನ್ವಯವಾಗುತ್ತಿದ್ದ ನೀತಿ. ಆದುದರಿಂದಲೇ ಯಯಾತಿ ತನ್ನ ಮಗಳನ್ನು ಅಷ್ಟು ಸುಲಭವಾಗಿ ದಾನವೀಯುತ್ತಾನೆ."1 ಇಲ್ಲಿ ಯಯಾತಿ ತನ್ನ ಸ್ವಾರ್ಥಕ್ಕಾಗಿ ಮಗನಾದ ಪುರುವಿನ ಯೌವ್ವನವನ್ನು, ಮಗಳಾದ ಮಾಧವಿಯ ಹೆಣ್ತನವನ್ನೂ ದುರುಪಯೋಗಪಡಿಸಿಕೊಳ್ಳುತ್ತಾನೆ.

ಪಕ್ಷಿಗೂಡಿನ ಸಂಸಾರ ಇಷ್ಟಪಡುವ ಮಾಧವಿ ತನ್ನ ತಾಯಿ ಲಕ್ಷ್ಮಿಯಂತೆಯೇ ಗೋಚರಿಸುತ್ತಾಳೆ. 'ಮಾಧವಿ ಅವಳ ಬದುಕನ್ನು ಅವಳು ಇಷ್ಟ ಬಂದಂತೆ ಅವಳೇ ಬದುಕಲಿ ಅವಳ ಬದುಕಿನ ಮೇಲೆ ಅವಳಿಗೆ ಸಂಪೂರ್ಣ ಅಧಿಕಾರವಿರಲಿ' ಎಂದು ತಾಯಿ ಲಕ್ಷ್ಮಿ ಆಶಿಸಿದರೂ 'ಮಾಧವಿಗೆ ಪ್ರೀತಿಯ ಸಂಬಂಧವೂ ಬೇಕು, ನಿರ್ಭೀತಿಯ ಸ್ವಾತಂತ್ರ್ಯವೂ ಬೇಕು' ಎಂದು ಬಯಸಿದರೂ ಅದು ಈಡೇರದೆ, ಅರಮನೆಯ ನೆರಳೂ ಸೋಕದೆ ಬೆಳೆದ ಮಾಧವಿಯ ಮೇಲೆ ಅರಮನೆಯ ಯಯಾತಿಯ ಭೂತ ಒಮ್ಮಿಂದೊಮ್ಮೆಲೆ ಆಕ್ರಮಣ ಮಾಡುತ್ತದೆ. ಲಕ್ಷ್ಮಿಯ ಮೇಲೆ ಯಯಾತಿಯೇ ನೇರವಾಗಿ ಅತ್ಯಾಚಾರ ಮಾಡಿದರೆ, ಮಾಧವಿಯ ಮೇಲೆ ಮುಂದೆ ನಡೆಯುವ ಸಾಮೂಹಿಕ ಅತ್ಯಾಚಾರಕ್ಕೆ ತಂದೆಯಾದ ಯಯಾತಿಯೇ ಕಾರಣವಾಗುವುದು ಘೋರ ದುರಂತವಾಗಿದೆ. ಲಕ್ಷ್ಮಿಯಂತೆಯೇ ಮಾಧವಿಯ ಕನಸುಗಳು ನುಚ್ಚುನೂರಾಗುತ್ತವೆ. ಕಾದಂಬರಿಯಲ್ಲಿ ಮುಂದೆ ತೆರೆದುಕೊಳ್ಳುವುದು ಮಾಧವಿಯ ದುರಂತದ ಬದುಕು. ಹೆಜ್ಜೆ ಹೆಜ್ಜೆಗೂ ವಿಷಸರ್ಪಗಳು ಎದುರಾಗುವವು. ಅವು ವಿಷವೆಂದು ದೂರ ನಿಲ್ಲಲಾಗುವುದೇ? ಇಲ್ಲ. ಮಾಧವಿ ಅವುಗಳೊಂದಿಗೆ ಸಂಗ ಬೆಳೆಸಬೇಕು. ಆ ವಿಷವನ್ನೇ ಅಪ್ಪಿ, ತನ್ನ ದೇಹವನ್ನು ಅವಕ್ಕೆ ಒಪ್ಪಿಸಬೇಕು. ಮನಸಿಲ್ಲದಿದ್ದರೂ ಮಾರ್ಗವಿಲ್ಲದೆ ಮಾಧವಿ ಅನುಭವಿಸುವ ಈ ಕ್ರೂರ ನರಕ ಯಾತನೆ ಕಲ್ಲನ್ನೂ ಕರಗಿಸಿಬಿಡುತ್ತದೆ. ಆದರೆ ಮನುಷ್ಯ ಮಾತ್ರ ಮರುಗುವುದೂ ಇಲ್ಲ. ಮತ್ತೆ ಮತ್ತೆ ಮಾಧವಿಯಂಥ ಮುಗ್ಧ ಹೆಣ್ಣು ಜೀವಗಳ ಮೇಲೆ ಮುಗಿಬೀಳುವುದೇ ಲೋಕದ ಗಂಡುಗಳ ದೊಂಬರಾಟವಾಗಿ ಕಾಣುತ್ತದೆ. ಮೈತುಂಬ ಬೆಳ್ಳಗಿರುವ ಕಿವಿಯೊಂದು ಮಾತ್ರ ಕಪ್ಪಗಿರುವ 800 ಕುದುರೆಗಳ ಸಂಪಾದನೆಗಾಗಿ ಗಾಲವ ಮಾಧವಿಯನ್ನು ತನ್ನ ದಾಳವಾಗಿ ಬಳಸಿಕೊಳ್ಳುತ್ತಾನೆ.

ಗಾಲವ ತನ್ನ ಗುರುದಕ್ಷಿಣೆಗಾಗಿ ಅಯೋಧ್ಯೆಯ ಹರ್ಯಶ್ವನ ಎದುರು ಮಾಧವಿಯನ್ನು ತಂದಾಗ, ರಾಜ ತನ್ನ ಘನತೆಯನ್ನೂ ಮೀರಿ ವರ್ತಿಸುತ್ತಾನೆ. ಇಂಥ ರಾಜರಿಗೆ ಘನತೆ ಎಂಬುದೂ ಉಂಟೆ? ಎಂಟುನೂರು ಅಶ್ವಗಳಿಗೆ ಬದಲಾಗಿ ಎರಡುನೂರು ಅಶ್ವಗಳನ್ನು ಗಾಲವನಿಗೆ ಕೊಟ್ಟು ಒಂದು ವರ್ಷ ಕಾಲ ಮಾಧವಿಯನ್ನು ಬಾಡಿಗೆಗೆ ಪಡೆಯುತ್ತಾನೆ ಹರ್ಯಶ್ವ. ಆ ವರ್ಷಪೂರ್ತಿ ಹಗಲು-ರಾತ್ರಿ ಎನ್ನದೆ ಮಾಧವಿಯನ್ನು ಭೋಗಿಸುವುದೇ ಹರ್ಯಶ್ವನ ಕೆಲಸ, ಪ್ರಜೆಗಳ ಹಿತದ ವಿಷಯ ದೇವರಿಗೇ ಬಿಟ್ಟದ್ದು!. ವರ್ಷವಾಗಿ ಹೋದಮೇಲೆ ಅವಳು ಸಿಕ್ಕುವುದಿಲ್ಲವಲ್ಲ ಎಂಬ ಆತಂಕದಿಂದ ಇರುವವರೆಗೆ ಅವಳನ್ನು ಸಂಪೂರ್ಣ ಹಿಂಡಿಬಿಡುತ್ತಾನೆ. ಮಾಧವಿಯ ಮನಸ್ಸು ಹೇಗಿದೆ? ಅವಳು ತನ್ನನ್ನು ಒಲಿದಿದ್ದಾಳೆಯೇ? ಅವಳನ್ನು ಹೇಗೆ ಒಲಿಸಿಕೊಳ್ಳುವುದು? -ಹೀಗೆ ಏನನ್ನೂ ಯೋಚಿಸದೆ ಗೂಳಿಯಂತೆ ದಾಳಿಯಿಡುವುದೇ ಹರ್ಯಶ್ವನ ಕೆಲಸ. ಮಹಾರಾಜನ ಕಾಮುಕತನಕ್ಕೆ ಸಿಕ್ಕಿ ಮಾಧವಿ ನರಳಿ ಹೋಗುತ್ತಾಳೆ. ಸ್ತ್ರೀಯನ್ನು ಕೇವಲ ಭೋಗದ ವಸ್ತುವೆಂದು ತಿಳಿದ ಈತ ಆಕೆಯ ಮೇಲೆ ರಾಕ್ಷಸತ್ವದ ದಬ್ಬಾಳಿಕೆ ನಡೆಸುತ್ತಾನೆ. ಈ ರಾಜನಂತೇ ಗೋಚರಿಸುವ ಇಂದಿನ ರಾಜಕಾರಣಿಗಳು, ಮಂತ್ರಿಗಳ ನಡವಳಿಕೆ ಗಮನಿಸಿದರೆ ಈ ಕಾದಂಬರಿಯ ಪ್ರಸ್ತುತತೆಯ ಅರಿವಾಗುತ್ತದೆ. ಆದರೆ ಆತನ ಮಹಾರಾಣಿಯ ನಡವಳಿಕೆ ಇದ್ದುದರಲ್ಲಿ ಮಾಧವಿಗೆ ಊರುಗೋಲಾಗಿ ಪರಿಣಮಿಸುತ್ತದೆ.

ಮುಂದೆ ಮಾಧವಿಗೆ ಎದುರಾಗುವುದು ಮತ್ತೆ ನೋವುಗಳ ಸರಮಾಲೆ. ಮಾಧವಿ ಮಾತ್ರ ನರಳುವವಳು. ಸುಲಿಯುವ ರಾಜರು ಮಾತ್ರ ಅವರೇ. ಆದರೆ ಹೆಸರುಗಳು ಮಾತ್ರ ಬೇರೆ ಬೇರೆ ಅಷ್ಟೇ. ಮತ್ತಿನ್ನೂರು ಕುದುರೆಗಳ ಸಂಪಾದನೆಗಾಗಿ ಮಾಧವಿಯು ದಿವೋದಾಸ ಮಹಾರಾಜನಲ್ಲಿ ಇರಬೇಕಾಗುತ್ತದೆ. ಈತ ಮುಖವಾಡಗಳಿಲ್ಲದ ಮಾನವೀಯ ನಡವಳಿಕೆಯುಳ್ಳ ವ್ಯಕ್ತಿಯಾಗಿ ಕಂಡುಬರುವುದು ವಿಶೇಷ ಎನಿಸುತ್ತದೆ. ಆದರೆ ರಾಣಿ ಐಶ್ವರ್ಯ ದೇವಿಯ ವರ್ತನೆ ಆರಂಭದಲ್ಲಿ ದಬ್ಬಾಳಿಕೆಯ ಸ್ವರೂಪದ್ದಾಗಿರುತ್ತದೆ. ಅಂತ್ಯದಲ್ಲಿ ರಾಜ-ರಾಣಿಯರಿಬ್ಬರಿಂದಲೂ ಆತ್ಮೀಯ ಭಾವ ಪ್ರಕಟಗೊಳ್ಳುತ್ತದೆ.

ಉಶೀನರ ಮಹಾರಾಜನ ಅರಮನೆಯಲ್ಲಿ ಮತ್ತೆ ವಿಭಿನ್ನ ಪರಿಸರವನ್ನು ಮಾಧವಿ ಎದುರಿಸುತ್ತಾಳೆ. ರಾಜನ ನಿರ್ಲಿಪ್ತತೆ, ರಾಣಿಯರ ಸಹಾಯ ಇದ್ದರೂ, ಹಿರಿಯರ ಕಾಮದಾಸೆ, ದಾಸಿ ಸೇವಂತಿಯ ಚುಚ್ಚು ಮಾತು ಮಾಧವಿಯನ್ನು ಗಳಿಗೆ ಗಳಿಗೆಗೂ ಇರಿಯುತ್ತದೆ. ಕಾದಂಬರಿಕಾರ್ತಿ ಇಲ್ಲಿ ಶೋಷಣೆಯ ನಾನಾ ಮುಖಗಳ ದರ್ಶನ ಮಾಡಿಸುತ್ತಾರೆ. ರಾಜ, ರಾಣಿ, ಹಿರಿಯರು, ಋಷಿಗಳು; ಗಂಡು, ಹೆಣ್ಣು, ದಾಸಿ, ವಯಸ್ಸಾದವರು, ಪಂಚೇಂದ್ರಿಯಗಳನ್ನೂ ವಶಪಡಿಸಿಕೊಂಡ ಮುನಿಗಳು –ಹೀಗೆ ಸಮಾಜದ ಅನೇಕ ಸ್ತರಗಳ ಜನರಿಂದ ಸ್ತ್ರೀ ಶೋಷಣೆ ನಿರಂತರವಾಗಿ ನಡೆಯುತ್ತಿರುವ ಕಡೆಗೆ ಕಾದಂಬರಿ ಬೊಟ್ಟು ಮಾಡಿ ತೋರಿಸುತ್ತದೆ.

ಮುಂದೆ ಕಾದಿರುವುದು ಘೋರ ದುರಂತ. ಅದೂ ಜಗತ್ಪ್ರಸಿದ್ಧ ವಿಶ್ವಾಮಿತ್ರನ ಆಸ್ಥಾನದಲ್ಲಿ ನಡೆಯುವುದು. ಆ ಹೊಲಸು ಕೃತ್ಯ ಮಾಡುವವನು ಸ್ವತಃ ವಿಶ್ವಾಮಿತ್ರನೇ ಎನ್ನುವುದು ವಾಕರಿಕೆ ಬರಿಸುತ್ತದೆ. ಗಾಲವ ಆರುನೂರು ಕುದುರೆಗಳನ್ನು ಮಾಧವಿಯ ಮೈಯನ್ನು ಮಾರಿ ಸಂಪಾದಿಸಿ, ಉಳಿದ ಎರಡುನೂರು ಕುದುರೆಗಳಿಗೆ ಮಾಧವಿಯನ್ನೇ ಗುರುವಿಗೆ ಒಪ್ಪಿಸುವುದೆಂದು ಮಾಧವಿಯನ್ನು ವಿಶ್ವಾಮಿತ್ರನೇ ಮದುವೆಯಾಗಿ ಗಂಡುಸಂತಾನ ಪಡೆಯಬೇಕೆಂದು ತೀರ್ಮಾನಿಸಿ ಬರುತ್ತಾನೆ. 'ನೀನು ಮೊದಲೇ ಇವಳನ್ನು ನನ್ನ ಬಳಿಗೇಕೆ ಕರೆ ತರಲಿಲ್ಲ, ವಂಶಪ್ರವರ್ತಕರಾದ ನಾಲ್ವರು ಮಕ್ಕಳನ್ನು ನಾನೇ ಇವಳಿಂದ ಪಡೆದುಕೊಳ್ಳಬಹುದಾಗಿತ್ತಲ್ಲವೆ? ಈಗಲಾದರೂ ಕರೆತಂದೆಯಲ್ಲ' ಎಂದು ವಿಶ್ವಾಮಿತ್ರರಾಡುವ ನುಡಿ ಅವರ ವ್ಯಕ್ತಿತ್ವಕ್ಕೆ ಕುಂದು ತರುವಂತಾಗುತ್ತದೆ. ಇಂದ್ರಿಯಗಳ ಮೇಲೆ ಗೆಲುವು ಸಾಧಿಸಿ, ಸಮಾಜದ ಒಳಿತಿಗೆ ಶ್ರಮಿಸಬೇಕಾದ ಮುನಿಗಳೇ ಇಂದ್ರಿಯಗಳ ದಾಸಾನುದಾಸರಾಗಿ ವರ್ತಿಸುವುದು ಅವರ ಇದುವರೆಗಿನ ಗೋಸುಂಬೆತನವನ್ನು ಬಯಲಿಗೆಳೆಯುತ್ತದೆ. ಮಾಧವಿ ವಿಶ್ವಾಮಿತ್ರರನ್ನೂ ದಿಟ್ಟತನದಿಂದ ಎದುರಿಸಿ, ಶಿಷ್ಯರಿಗೆ ತಾಯಿಪ್ರೀತಿ ತೋರಿಸಿ, ಎಲ್ಲ ಕಷ್ಟಗಳನ್ನೂ ಸಹಿಸಿ ತನ್ನ ಕೆಲಸವನ್ನು ನಿಷ್ಠೆಯಿಂದ ಪೂರೈಸುತ್ತಾಳೆ. ಆದರೆ ಗಾಲವ ಮತ್ತು ಮಾಧವಿ ಇಬ್ಬರ ವಿಷಯಗಳಲ್ಲೂ ಸೋಲು ಕಾಣುವ ವಿಶ್ವಾಮಿತ್ರರು ಅಷ್ಟು ವರ್ಷಗಳ ಕಾಲ ತಪಸ್ಸು ಮಾಡಿದ್ದೇಕೆ? ಅದರ ಫಲಗಳೇನು? ಎನ್ನುವ ಪ್ರಶ್ನೆಗಳು ಮಾತ್ರ ಗಾಢವಾಗಿ ಕಾಡುತ್ತವೆ.

ಗೋಮುಖ ವ್ಯಾಘ್ರನಂತಿರುವ ಋಷಿಮುನಿ, ಜನರ ಕಣ್ಣಿಗೆ ದೇವರೆಂದು ಕಾಣುವ ಕಾಮುಕ ರಾಜರುಗಳು ಜನಸಾಮಾನ್ಯರನ್ನು ಸುಲಿದು ತಿನ್ನುತ್ತಾರೆ. ಮಹಿಳೆಯರನ್ನು ತಮ್ಮ ಸುಖ–ಭೋಗಗಳಿಗೆ ಆಟಿಕೆಯಂತೆ ಬಳಸಿಕೊಳ್ಳುತ್ತಾರೆ. ಈ ರಾಜ–ಋಷಿಗಳು ತಮ್ಮ ಪರವಾದ ವ್ಯವಸ್ಥೆಯನ್ನು ನಿರ್ಮಿಸಿ, ಜನರ ರಕ್ತವನ್ನು ನಿರಂತರ ಹೀರುವ ರಾಕ್ಷಸರಾಗಿರುತ್ತಾರೆ. ರಾಜರನ್ನು ಹೊಗಳಿ ಅಟ್ಟಕ್ಕೇರಿಸುವ, ಅವರ ಕಾರ್ಯಗಳನ್ನೆಲ್ಲ ಕಣ್ಮುಚ್ಚಿ ಸ್ವೀಕರಿಸುವ ಬ್ರಾಹ್ಮಣರು ಒಂದು ಕಡೆಯಾದರೆ, ಭೂಮಿಯ ಮೇಲಿನ ದೇವರಾದ ಬ್ರಾಹಣರಿಗೆ ಸಕಲ ಸವಲತ್ತು ಕೊಟ್ಟು ಅವರ ಅನೀತಿಯಂಥ ನೀತಿಯನ್ನು ರಾಜ್ಯದ ಕಾನೂನಾಗಿ ಮಾಡುವ ಕ್ಷತ್ರಿಯರು ಅವರಿಗೆ ಪೋಷಕರಂತೆ. ಈ ಕ್ಷತ್ರಿಯ–ಬ್ರಾಹ್ಮಣರಿಬ್ಬರ ಒಗ್ಗೂಡುವಿಕೆಯಲ್ಲಿ ಸಿಕ್ಕಿ ನರಳಿ ಸಾಯುವವರು ಮಾತ್ರ ಬಹುಸಂಖ್ಯಾತರಾದ ಜನಸಾಮಾನ್ಯರು. ಅದಕ್ಕಾಗಿಯೇ ಕುವೆಂಪು ಕೊನೆಯ ರಾಜನ ಕರುಳು ಕೊನೆಯ ಪುರೋಹಿತನ ಕೊರಳಿಗೆ ಉರುಳಾದಾಗ ಮಾತ್ರ ಜಗತ್ತಿಗೆ ಒಳಿತಾಗುತ್ತದೆ ಎಂಬ ವಾಲ್ಟೇರನ ಮಾತನ್ನು ಮತ್ತೆ ಮತ್ತೆ ಒತ್ತಿ ಹೇಳುತ್ತಾರೆ.

ಮಾಧವಿ ಮಹಾಸಮುದ್ರದಂತೆ. ನೋವಿನ ವಿಷಯದಲ್ಲಂತೂ ಈ ಮಾತು ಸಂಪೂರ್ಣ ಒಪ್ಪುತ್ತದೆ. ಸಮುದ್ರದ ಆಳ ಅರಿತವರಾರು? ಅಂತೆಯೇ ಮಾಧವಿ ಅನುಭವಿಸಿದ ನರಕದ, ನೋವಿನ, ಶೋಕದ ಆಳ ಗುರುತಿಸಲಾಗುವುದೇ? ಖಂಡಿತ ಇಲ್ಲ. ಸಸಿಯಂತೆ ಸುಕೋಮಲವಾಗಿದ್ದವಳು ಪುರುಷ ಪ್ರಧಾನತೆಯ ರೌದ್ರತೆಗೆ ಸಿಕ್ಕಿ ಶವವಾಗುತ್ತಾಳೆ. ಅವಳ ಕನಸುಗಳೆಲ್ಲಾ ಸುಟ್ಟು ಕರಕಲಾಗಿ, ಬಯಕೆಗಳೆಲ್ಲಾ ಬತ್ತಿಹೋಗಿ ಬಡವಾಗುತ್ತಾಳೆ. ಆಕೆ ಬದುಕಲೂ ಆಗದೆ, ಸಾಯಲೂ ಬಾರದಂಥ ಸಂದಿಗ್ಧ ಸ್ಥಿತಿಯಲ್ಲಿ ಸದಾ ನರಳುತ್ತಿರುತ್ತಾಳೆ.

ಗೊಡ್ಡು ಗುರುವಿಗೆ ಗಾಂಪ ಶಿಷ್ಯ, ಅಂತೆಯೇ ವಿಶ್ವಾಮಿತ್ರನಿಗೆ ಗಾಲವ. ಗುರುವಿಗೆ ದಕ್ಷಿಣೆ ಕೊಡಲೇಬೇಕು ಎಂದು ಹಟ ಹಿಡಿಯುವ ಗಾಲವ ಒಂದು ಕಡೆ. ಮತ್ತೊಂದೆಡೆಗಿರುವ ಆ ಗುರುವೂ ಎಂಥವನೆಂದರೆ 'ಮೈಯೆಲ್ಲ ಬೆಳ್ಳಗಿರುವ ಕಿವಿ ಮಾತ್ರ ಕಪ್ಪಗಿರುವ ಎಂಟುನೂರು ಕುದುರೆಗಳನ್ನು ಕೊಡು' ಎನ್ನುವ ಅಸಾಧ್ಯದ ಗುರಿಯೊಡ್ಡುವ ಹೆಡ್ಡ. ಶಿಷ್ಯನ ಇತಿಮಿತಿಗಳನ್ನೇ ಅರಿಯದ, ಶಿಷ್ಯನಿಗೆ ಒಳಿತನ್ನೇ ಬಯಸದ ಈತ ಎಂಥ ಗುರು? ಶಿಷ್ಯನ ಬೆಳವಣಿಗೆ ಬಯಸುವ ಗುರುವೇ ಈತ? ಇಲ್ಲಿ ಶಿಷ್ಯ ಗಾಲವನ ಸೋಲು ಗುರುವಾಗಿ ತನ್ನ ಸೋಲೂ ಆಗುತ್ತದೆ ಎಂದು ತಿಳಿಯದಾದನೆ ಆ ವಂಚಕ ವಿಶ್ವಾಮಿತ್ರ. 'ಕೋಣಗಳೆರಡರ ಹೋರಾಟ ಗಿಡಕ್ಕೆ ಮೃತ್ಯು' ಎನ್ನುವಂತೆ ಇವರಿಬ್ಬರ ಆಟದಲ್ಲಿ ಸಿಕ್ಕಿ ನರಳುವವಳು ಮಾತ್ರ ಏನೂ ಅರಿಯದ ಮುಗ್ಧೆ ಮಾಧವಿ. ಮಾಧವಿ ಆತನಿಗೆ ತನ್ನ ಬೆಳೆ ಬೆಳೆಯುವ ಫಲವತ್ತಾದ ಭೂಮಿ ಆದಳು ಅಷ್ಟೇ. ವಿಶ್ವಾಮಿತ್ರನಿಗೆ ಗುರುದಕ್ಷಿಣೆ ಕೊಟ್ಟವರು ಗಾಲವನಲ್ಲ, ಮಾಧವಿ. "ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯುವವರನ್ನು ಗುರು ಎನ್ನುತ್ತಾರೆ. ಬೆಳಕಿನಿಂದ ಕತ್ತಲೆಡೆಗೆ ನೀವು ಕರೆದೊಯ್ಯುತ್ತಿದ್ದೀರಿ. ನನಗೆ ನಿಮ್ಮಷ್ಟು ವಿದ್ಯೆ, ತಿಳಿವಳಿಕೆಯಿಲ್ಲ. ನಮ್ಮನ್ನು ನಾವು ನಿರಸನಗೊಳಿಸಿಕೊಳ್ಳುವುದು ಜ್ಞಾನದ ಮೊದಲ ಸಂಕೇತ. ನಮ್ಮ ಪ್ರತಿಷ್ಠೆಗೋಸ್ಕರ ಬೇರೆಯವರನ್ನು ನಿರಸನಗೊಳಿಸುವುದು ಅಜ್ಞಾನದ ಸಂಕೇತ. ಅಂತಹ ಅಜ್ಞಾನದಿಂದಲೇ ಗಾಲವರಂತಹ ವ್ಯಕ್ತಿಗಳನ್ನು ಸೃಷ್ಟಿ ಮಾಡುತ್ತಿದ್ದೀರಿ, ಗಾಲವರು ನನ್ನಂತಹ ಹೆಣ್ಣಿನ ಬದುಕನ್ನು ದುರಂತಕ್ಕೆ ನೂಕಿದ್ದಾರೆ. ಇದೆಲ್ಲ ನಿಮ್ಮ ಗುರುತನದ ಪರಿಣಾಮವೆ."2 ಮಾಧವಿಯ ಮಾತಿನ ಬಾಣಗಳು ಗುರುವಿನ ಬಗ್ಗೆಯೇ ಚಿಂತಿಸುವಂತೆ ಮಾಡುತ್ತವೆ.

ಯಯಾತಿಯ ಅರಮನೆಗೆ ಹಿಂತಿರುಗಿ ಬರುವ ಮಾಧವಿಯು ಯಯಾತಿಯ ಬಣ್ಣದ ಮಾತಿಗೆ ಮರುಳಾಗದೆ, ಅವನಿಗೇ ಬುದ್ಧಿ ಹೇಳಿ ತನ್ನ ಹಳ್ಳಿಗೆ ವಾಪಾಸಾಗುತ್ತಾಳೆ. ತನ್ನ ತಾಯಿ, ಅತ್ತೆಯರಲ್ಲಿ ದುಃಖ ತೋಡಿಕೊಳ್ಳುವ ಮಾಧವಿ, ಆದಿಮನ ಜೊತೆಯಲ್ಲಿ ತನ್ನ ವಿಚಾರಗಳನ್ನು ಹಂಚಿಕೊಳ್ಳುತ್ತಾಳೆ. ಅನುಪಮಾ ನಿರಂಜನರ ಮಾಧವಿ ಪುರುಷಪ್ರಧಾನತೆಯನ್ನು ಧಿಕ್ಕರಿಸಿ ಅಕ್ಕಮಹಾದೇವಿಯಂತೆ ಕಾಡಿನ ಕಡೆಗೆ ಮುನ್ನುಗ್ಗುವ ದಿಟ್ಟ ನಿಲುವು ತಳೆದರೆ, ವೇದಾ ಅವರ ಮಾಧವಿ ಎಲ್ಲ ಬಗೆಯ ದುಃಖಗಳನ್ನೂ ದಿಟ್ಟತನದಿಂದ ಎದುರಿಸಿ ಧೈರ್ಯಗುಂದದೆ ಆದಿಮನ ಜೊತೆಗೆ ಹೊಸ ಬಾಳಿಗೆ ದಾಪುಗಾಲಿರಿಸುತ್ತಾಳೆ. ಇಬ್ಬರು ಕಾದಂಬರಿಕಾರ್ತಿಯರೂ ನೋಡುವ ದೃಷ್ಟಿಕೋನ ವಿಭಿನ್ನವಾಗಿದೆ, ಧನಾತ್ಮಕವಾಗಿದೆ.

ಚರಿತ್ರೆಯ ಪುನರ್‌ರಚನೆ ಕಪ್ಪು ಕಿವಿಯ ಬಿಳಿಯ ಕುದುರೆಗಳು ಕಾದಂಬರಿಯಲ್ಲಿದೆ. ಇಲ್ಲಿ ಪುರಾಣ ಭಂಜಕತೆ, ಪುರಾಣದ ವಿರುದ್ಧ ಪ್ರಶ್ನೆ, ಪುರಾಣದ ಮರು ವಿಶ್ಲೇಷಣೆ ಸಾಧ್ಯವಾಗಿದೆ. ಇದು ಮಾಧವಿಯ ಮೂಕವೇದನೆಯನ್ನು ಅನಾವರಣ ಮಾಡುವ ಕೃತಿ. ಸಮಕಾಲೀನ ಸಂದರ್ಭದ ಹಲವು ಪ್ರಶ್ನೆಗಳನ್ನು ಎತ್ತುತ್ತಾ ತತ್ತರಿಸುತ್ತಿರುವ ಮಹಿಳಾ ಸಮಾಜದ ಬದುಕನ್ನು ಹೊಸ ಆಶೋತ್ತರಗಳೊಡನೆ ಕಟ್ಟಿಕೊಡುತ್ತಾ ಹೋಗುವ ಈ ಕಾದಂಬರಿ ಎಂದಿಗೂ ಪ್ರಸ್ತುತವೆನಿಸುತ್ತದೆ. ಚರಿತ್ರೆಯ ಗೊಡ್ಡು ನಂಬಿಕೆಗಳನ್ನು ವರ್ತಮಾನಕ್ಕೆ ತಂದು ಪ್ರಶ್ನಿಸಿ, ಚರ್ಚಿಸಿ, ಅದರ

ಸೋಗಲಾಡಿತನವನ್ನು ಬಯಲಿಗೆಳೆಯುವಲ್ಲಿ ಕಾದಂಬರಿ ಕ್ರಿಯಾಶೀಲವಾಗಿದೆ. ಮೌನಕ್ಕೂ ಒಂದು ಭಾಷೆ ಇದೆ ಎಂಬುದನ್ನು ಈ ಕಾದಂಬರಿಯ ಮಾಧವಿ ಸಮರ್ಥಿಸುತ್ತಾ ಹೋಗುವುದು ಶ್ರೇಷ್ಠ ಮಟ್ಟದ್ದಾಗಿದೆ.

ಪ್ರಾಣಿಯಂತೆ ಯಕಶ್ಚಿತ್ ವಸ್ತುವಿನಂತೆ ದಾನ ಕೊಡಲ್ಪಟ್ಟ ಮಾಧವಿಯ ಮೇಲೆ ರಾಜಶಾಹಿಯ ಶೋಷಣೆ, ದಬ್ಬಾಳಿಕೆಯ ಜೊತೆಗೆ ಧರ್ಮಶಾಹಿ ಶೋಷಣೆಯೂ ನಡೆದುಬಿಡುವ ಭೀಕರ ಕೃತ್ಯ ಜರುಗುತ್ತದೆ. ದಾನದ ವಸ್ತುವಾಗಿ, ಭೋಗದ ಸಾಧನವಾಗಿ, ಹೆರಿಗೆಯ ಯಂತ್ರವಾಗಿ, ಗಂಡು ಹೇಳಿದಂತೆ ಕೇಳುವ ಕುರಿಯಾಗಿ ಬದುಕು ಸಾಗಿದುವ ಮಾಧವಿ ಅನುಭವಿಸುವ ಯಾತನೆ, ಪರಿಪಾಟಲುಗಳು ಕೇವಲ ಕರುಳಿಗೆ ಚುಚ್ಚಿ ಕರುಣಾರಸ ಹರಿಸದೆ, ಸ್ತ್ರೀ ಶೋಷಣೆಯ ಮತ್ತು ಲಿಂಗತಾರತಮ್ಯದ ನಿರಂತರತೆಗೆ ಸಾಕ್ಷಿಯಾಗಿದೆ. ಒಂದು ಕಡೆ ಸ್ತ್ರೀ ಶೋಷಣೆ, ಮತ್ತೊಂದೆಡೆ ಬಾಡಿಗೆ ತಾಯಂದಿರ ಸಮಸ್ಯೆ, ಮಗದೊಂದೆಡೆ ಗಂಡು–ಹೆಣ್ಣು ಲಿಂಗ ತಾರತಮ್ಯದ ಸಮಸ್ಯೆಗಳ ಮುಪ್ಪುರಿ ಚಿತ್ರಣ ಕಪ್ಪು ಕಿವಿಯ ಬಿಳಿಯ ಕುದುರೆಗಳು ಕಾದಂಬರಿಯಲ್ಲಿದೆ. "ಕಾದಂಬರಿಯ ಶೀರ್ಷಿಕೆ 'ಕಪ್ಪು ಕಿವಿಯ ಬಿಳಿಯ ಕುದುರೆಗಳು' ಒಂದು ಅದ್ಭುತ ರೂಪಕವಾಗಿ ಇಡೀ ಕಾದಂಬರಿಯ ಆಶಯವನ್ನು ಧ್ವನಿಸುವಲ್ಲಿ ಸಫಲವಾಗಿದೆ. ಅಶ್ವಮೇಧಯಾಗದಲ್ಲಿ ವಿಶೇಷವಾಗಿ ಬಳಸಲ್ಪಡುವ ಈ ಕುದುರೆಗಳು ರಾಜ ಮಹಾರಾಜರುಗಳ ಶೌರ್ಯ, ಪರಾಕ್ರಮಗಳ ಪ್ರದರ್ಶನ, ಸಾಮ್ರಾಜ್ಯ ವಿಸ್ತರಣೆಯ ದಾಹ, ಅಧಿಕಾರದ ವ್ಯಾಮೋಹ, ಭೂಮಿಯ ಮೇಲಿರುವ ಸಕಲ ಚರಾಚರ ವಸ್ತುಗಳೆಲ್ಲಾ ತನ್ನ ಸುಖಭೋಗಕ್ಕಾಗಿಯೇ ಇರುವುದೆನ್ನುವ ಅಹಂ–ಈ ಎಲ್ಲಾ ಆಕಾಂಕ್ಷೆಗಳ ಕಾವ್ಯಾತ್ಮಕ ಪ್ರತಿಮೆಯಾಗಿ ಈ ಕಾದಂಬರಿಯಲ್ಲಿ ಹಲವು ಧ್ವನಿಗಳನ್ನು ಪ್ರಕಟಿಸುತ್ತದೆ. ರಾಜ ಮಹಾರಾಜರುಗಳ ಆಸೆ, ಆಕಾಂಕ್ಷೆಗಳ ಕಾಲಡಿಯಲ್ಲಿ ಧೂಳಾಗಿ ನೋಯುವ ಹಲವು ಹೆಣ್ಣುಗಳ ಪ್ರತಿನಿಧಿಯಾಗಿರುವ ಇಲ್ಲಿನ ಮುಖ್ಯ ಪಾತ್ರವಾದ 'ಮಾಧವಿ' ಆಧುನಿಕ ಚಿಂತನೆಯನ್ನ ಉಸಿರಾಡುತ್ತಾಳೆ. ಪ್ರಭುತ್ವದ ಅಮಾನವೀಯತೆಯನ್ನು, ನಿರಂಕುಶತ್ವವನ್ನು, ಢಂಬಾಚಾರವನ್ನು ಪ್ರಶ್ನಿಸಿ, ಎದುರಿಸುವ ದಿಟ್ಟ ಧ್ವನಿಯಾಗಿ ಮಾರ್ಪಡುತ್ತಾಳೆ. ಪುರುಷ ರಾಜಕಾರಣದಿಂದಾಗಿ ನೋವಿನ ಮುದ್ದೆಯಾಗಿ, ಶೋಷಿತರ ಪ್ರತಿನಿಧಿಯಾಗಿ ಚಿತ್ರಿತವಾಗುವ ಮಾಧವಿ ಈ ರಾಜಕಾರಣದ ಬೇರುಗಳನ್ನು, ವಿವಿಧ ಮಗ್ಗುಲುಗಳನ್ನು ಶೋಧಿಸುತ್ತಾಳೆ. ಪ್ರಭುತ್ವ ಮತ್ತು ಧರ್ಮದ ಸಂಗವು ಸೃಷ್ಟಿಸುವ ವಿಷವರ್ತುಲದಲ್ಲಿ ನೋಯುವ ಹೆಣ್ಣುಗಳ ಮನಸ್ಸು ಇಲ್ಲಿ ಅನಾವರಣಗೊಳ್ಳುತ್ತದೆ. ಹಾಗೆಯೇ ಹೆಣ್ಣನ್ನು ಸುತ್ತುವರಿದಿರುವ ಪುರಾಣವನ್ನು ಭಂಜಿಸುತ್ತಲೇ ಸ್ತ್ರೀ ಮಿಥ್ಯೆಯನ್ನು ಬೆತ್ತಲಾಗಿಸುವ ಕ್ರಿಯೆಯೂ ಇಲ್ಲಿ ಪ್ರಜ್ಞಾಪೂರ್ವಕವಾಗಿ ನಡೆದಿದೆ."3

ಎಂ.ಎಸ್. ವೇದಾ ಅವರು ಕಪ್ಪು ಕಿವಿಯ ಬಿಳಿಯ ಕುದುರೆಗಳು ಕಾದಂಬರಿಯಲ್ಲಿ ಪೌರಾಣಿಕ ಅಸ್ಥಿಪಂಜರವನ್ನು ತೆಗೆದುಕೊಂಡು ವೈಜ್ಞಾನಿಕ ವಿಶ್ಲೇಷಣೆಯ ಮುಖೇನ ಕಲ್ಪನೆ ಮತ್ತು ಚಿಂತನೆಯ ರಕ್ತ–ಮಾಂಸಗಳನ್ನು ಸೇರಿಸಿ ಶ್ರೇಷ್ಠ ಕಾದಂಬರಿಯನ್ನು ಹೆಣೆದಿದ್ದಾರೆ. ಇದು ಸ್ತ್ರೀ ಸಂವೇದನೆಯ ದೃಷ್ಟಿಯಿಂದ ಗಟ್ಟಿಯಾದ ಕೃತಿ. ಆದರೆ ಹರ್ಯಶ್ವ, ದಿವೋದಾಸ, ಉಶೀನರ ರಾಜರುಗಳ ಸಂದರ್ಭದಲ್ಲಿ ಅವರ ಅರಮನೆಯ ವರ್ಣನೆ, ಅಲ್ಲಿನ ನೃತ್ಯ, ಅವರ ಮಾತು–ಕತೆ, ವಿಷಯಲಂಪಟತನ, ಲಕ್ಷ್ಮಿ–ಮಾಧವಿಯ ಬದುಕಿನ ಚಿತ್ರಣ ಮೊದಲಾದ ಸಂದರ್ಭಗಳಲ್ಲಿ ಪುನರಾವರ್ತನೆಯ ಭೂತ ಮತ್ತೆಮತ್ತೆ ಕಾಡುತ್ತದೆ. ಏಕತಾನತೆಯ ಸುರುಳಿ ಬಿಚ್ಚಿ ಚುಚ್ಚುತ್ತದೆ. ಆದರೆ ಕಾದಂಬರಿಯ ರಚನೆಯ ಹಿನ್ನೆಲೆಯಲ್ಲಿ ಸ್ತ್ರೀ ನೋವನ್ನು ದಾಖಲು ಮಾಡುವ ಸ್ಪಷ್ಟ ಉದ್ದೇಶ ಇದ್ದು ಅದು ಸಾರ್ಥಕವೇ ಆಗಿದೆ. ಲಕ್ಷ್ಮಿ–ಮಾಧವಿಯರ ನೋವನ್ನು ಕಾದಂಬರಿ ಪರಿಣಾಮಕಾರಿಯಾಗಿಯೇ ಹೇಳುತ್ತದೆ. ಮಾಧವಿ ಪಾತ್ರದ ಜೀವಂತ ಚಿತ್ರಣ ಇರುವುದರಿಂದಲೇ ಕಾದಂಬರಿ ಬೇಸರ ಮೂಡಿಸದೆ ಓದಿಸಿಕೊಂಡು ದಾಪುಗಾಲಿಡುತ್ತದೆ. ಕಾದಂಬರಿಕಾರ್ತಿಯ ಅಧ್ಯಯನ, ಅವರ ಸ್ತ್ರೀ ಸಂವೇದನೆ ದಾಖಲಿಸುವ ಉತ್ಕಟ ಅಭಿಲಾಷೆ ಸಾರ್ಥಕವಾಗಿದೆ.

**ಅಡಿಟಿಪ್ಪಣಿಗಳು**

1. ಮಾಧವಿ–ಡಾ.ಅನುಪಮಾ ನಿರಂಜನ, ಪು.6–7, 2005
2. ಕಪ್ಪು ಕಿವಿಯ ಬಿಳಿಯ ಕುದುರೆಗಳು,ಎಂ.ಎಸ್.ವೇದಾ, ಮುನ್ನುಡಿ–ಎನ್.ಗಾಯತ್ರಿ, ಪು.3–4,2007
3. ಕಪ್ಪು ಕಿವಿಯ ಬಿಳಿಯ ಕುದುರೆಗಳು,ಎಂ.ಎಸ್.ವೇದಾ, ಪು.280,2007

**ಪರಾಮರ್ಶನ ಪುಸ್ತಕಗಳು**


1. ಕಪ್ಪು ಕಿವಿಯ ಬಿಳಿಯ ಕುದುರೆಗಳು, ಎಂ.ಎಸ್. ವೇದಾ, ಸಂವಹನ, ಮೈಸೂರು, 2007
2. ಮಾಧವಿ–ಡಾ.ಅನುಪಮಾ ನಿರಂಜನ, ಡಿ.ವಿ.ಕೆ.ಮೂರ್ತಿ, ಮೈಸೂರು, 2005